2

ಇಲಾಖೆ / ವಿಷಯ : DEPARTMENT / SUBJECT: ಗೃಹ – (ಐಎಂಎ ಹಗರಣ) ಮಾಜಿ ಸಚಿವ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 23/11/20

---

## ಐಎಂಎ ಹಗರಣದಲ್ಲಿ ಪಾತ್ರದ ಶಂಕೆ

# ನಿಲ್ಲದ ಸಿಬಿಐ ಶಿಕಾರಿ ರೋಷನ್ ಜೈಲಿಗೆ

23/11/20

ಸಂ.ಕ.ಸಮಾಚಾರ ಬೆಂಗಳೂರು

- ಐಎಂಎ ಹಗರಣದಲ್ಲಿ ಸಿಬಿಐ ಬಲೆಗೆ ಬಿದ್ದ ಮಾಜಿ ಸಚಿವ
- ಪ್ರಮುಖ ಆರೋಪಿ ಖಾನ್ ಜತೆ ಶಾಮೀಲು ಆರೋಪ
- 14 ದಿನ ನ್ಯಾಯಾಂಗ ವಶಕ್ಕೆ
- ಮತ್ತೊಬ್ಬ ಮಾಜಿ ಸಚಿವ ಜಮೀರ್ ಕೂಡ ಆರೋಪಿ



ಬಹುಕೋಟಿ ಐಎಂಎ ವಂಚನೆ ಹಗರಣದಲ್ಲಿ ಮಾಜಿ ಸಚಿವ ಆರ್.ರೋಷನ್ ಬೇಗ್ ಅವರನ್ನು ಸಿಬಿಐ ಭಾನುವಾರ ಬಂಧಿಸಿದ್ದು, ಸಿಬಿಐ ವಿಶೇಷ ನ್ಯಾಯಾಲಯ 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದೆ. ಆರು ಬಾರಿ ಸಚಿವರಾಗಿ ಹಾಗೂ ಎಂಟು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಬೇಗ್ ಬಂಧನದ ಮೂಲಕ ಐಎಂಎ ಹಗರಣದಲ್ಲಿ ಬಂಧನಕ್ಕೊಳಗಾದ ಮೊದಲ ರಾಜಕಾರಣಿಯಾಗಿದ್ದಾರೆ.

ಈಗಾಗಲೇ ಬಂಧನದಲ್ಲಿರುವ ಐಎಂಎ ಹಗರಣದ ಪ್ರಮುಖ ಆರೋಪಿ ಮೊಹಮದ್ ಮನ್ಸೂರ್ ಅಲಿಖಾನ್‌ನನ್ನು ನ್ಯಾಯಾಂಗ ಬಂಧನದಿಂದ ಹೆಚ್ಚಿನ ವಿಚಾರಣೆಗೆ ಶುಕ್ರವಾರ ಸಂಜೆ ಮೂರು ದಿನಗಳ ಕಾಲ ಸಿಬಿಐ ವಶಕ್ಕೆ ಪಡೆಯಲಾಗಿತ್ತು. ಖಾನ್ ಈ ಹಿಂದೆಯೇ ತಮ್ಮಿಂದ 400 ಕೋಟಿ ರೂ.ಗಳನ್ನು ರೋಷನ್ ಬೇಗ್ ಪಡೆದಿದ್ದಾರೆ ಎಂದು ಹೇಳಿಕೆ ನೀಡಿದ್ದ. ಈ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆ ರೋಷನ್ ಬೇಗ್ ಅವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದರು.

ಗಂಗಾನಗರದಲ್ಲಿರುವ ಸಿಬಿಐ ಕಚೇರಿಯಲ್ಲಿ ಭಾನುವಾರ ದಿನವಿಡೀ ಬೇಗ್ ವಿಚಾರಣೆ ನಡೆಸಿದ ಸಿಬಿಐ ಅಧಿಕಾರಿ ಗಳು ಸಂಜೆ ಸಿಬಿಐ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಿದರು. ನಂತರ ನ್ಯಾಯಾಲಯ ಬೇಗ್‌ಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ ಆದೇಶ ನೀಡಿದ ಬಳಿಕ ಅವರನ್ನು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಸ್ಥಳಾಂತರಿಸಲಾಯಿತು.

ಪುಟ 04